# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.53/2025

Pw-02

Cw-02

ಸಾಕ್ಷಿದಾರರ ಹೆಸರುಃ ಶ್ರೀ ಶಿವಪ್ಪ ಡೊಳ್ಳೀನ್

ತಂದೆಃಗಂಡನ ಹೆಸರುಃ ಶ್ರೀ ಗುಡ್ಡಪ್ಪ

ವಯಸ್ಸುಃ 43 ವರ್ಷ

ಉದ್ಯೋಗಃ ಕೂಲಿ

ವಾಸ ಸ್ಥಳಃ ವೈ.ಟಿ ಹೊನ್ನತ್ತಿ, ತಾಃ ರಾಣೇಬೆನ್ನೂರು

**ದಿನಾಂಕ:03.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಈಗ್ಗೆ 6-7 ತಿಂಗಳ ಹಿಂದೆ ಒಂದು ದಿನ ಮಧ್ಯಾಹ್ನ 2.30-3.00 ಗಂಟೆ ಸಮಯದಲ್ಲಿ ರಾಣೇಬೆನ್ನೂರಿನ ಡಿವೈಎಸ್‌ಪಿ ರವರು ನಮ್ಮೂರಿನ ಗ್ರಾಮ ಪಂಚಾಯತಿ ಕಚೇರಿ ಹತ್ತಿರ ಬಂದಿದ್ದರು. ಸದರಿ ಡಿವೈಎಸ್ಪಿ ರವರು ನನ್ನನ್ನು ಮತ್ತು ಚಂದ್ರಪ್ಪರವರನ್ನು ಪಂಚಾಯತಿ ಜಾಗಕ್ಕೆ ಕರೆಸಿದರು. ಆಗ ನಾವಿಬ್ಬರು ಅಲ್ಲಿಗೆ ಹೋದೆವು. ಆಗ ಡಿವೈಎಸ್ಪಿ ರವರು ಗ್ರಾಮ ಪಂಚಾಯತಿ ಜಾಗವನ್ನು ಪರಿಶೀಲಿಸಿ, ಸ್ಥಳ ಪಂಚನಾಮೆ ಜರುಗಿಸಿ, ಫೋಟೋ ತೆಗೆದುಕೊಂಡು ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸದರಿ ಸ್ಥಳ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು, ನನ್ನ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಫೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ನಿಪಿ-4 ರಿಂದ 9 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ 1 ರಿಂದ 6 ನೇ ಆರೋಪಿತರ ಪರವಾಗಿ ಶ್ರೀ ಎನ್.ಜಿ.ಹೆಚ್ ವಕೀಲರಿಂದಃ**

2. ನಾನು ಸಹಿ ಮಾಡಿದ ದಾಖಲಾತಿಯಲ್ಲಿ ಪೊಲೀಸರು ಏನು

ಬರೆದುಕೊಂಡಿದ್ದಾರೆಂದು ನನಗೆ ಗೊತ್ತಿದೆ. ಗ್ರಾಮ ಪಂಚಾಯತಿ ಜಾಗದ ಆಸ್ತಿಯ ನಂಬರ್ ನನಗೆ ನೆನಪಿಲ್ಲ. ಪೊಲೀಸರು ಗ್ರಾಮ ಪಂಚಾಯತಿ ಆಸ್ತಿಯ ನಂಬರ್ ನ್ನು ಏನೆಂದು ಬರೆದುಕೊಂಡರು ನನಗೆ ಗೊತ್ತಿಲ್ಲ. ಪೊಲೀಸರು ನನ್ನ 1 ಅಥವಾ 2 ಸಹಿಗಳನ್ನು ಪಡೆದುಕೊಂಡರು. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ಆದ ಕಾರಣ ಪೊಲೀಸರು ನಾನು ಸಹಿ ಮಾಡಿರುವ ದಾಖಲಾತಿಯಲ್ಲಿ ಏನು ಬರೆದುಕೊಂಡಿದ್ದಾರೆ ನನಗೆ ಗೊತ್ತಿಲ್ಲ.

3. ಪೊಲೀಸರು ಸ್ಥಳ ಪಂಚನಾಮೆ ಮಾಡಿದಾಗ ಎಷ್ಟು ಸಮಯ ಆಗಿತ್ತು ಎಂದು ನನಗೆ ಈಗ ನೆನಪಿಲ್ಲ. ಪೊಲೀಸರು ನನ್ನನ್ನು ಎಲ್ಲಿಗೂ ಕರೆಸಿಲ್ಲ ಮತ್ತು ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ಪೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಪೋಟೋ ತೆಗೆದುಕೊಳ್ಳಲು ಯಾವ ಕ್ಯಾಮೆರಾವನ್ನು ಉಪಯೋಗಿಸಿದರು ಎಂದು ನನಗೆ ಈಗ ಹೇಳಲಾಗುವುದಿಲ್ಲ. ಪೋಲೀಸರು ಒಟ್ಟು ಎಷ್ಟು ಪೋಟೋಗಳನ್ನು ತೆಗೆದಿರುತ್ತಾರೆಂದು ನನಗೆ ಗೊತ್ತಿಲ್ಲ. ನಾನು ಮತ್ತು ಪಿರ್ಯಾದಿ ಒಂದೇ ಊರಿನವರು.

4. ಆರೋಪಿತರು ಪಂಚಾಯತಿ ಜಾಗದ ಮೇಲೆ ರಾಣೇಬೆನ್ನೂರು ಸಿವಿಲ್ ನ್ಯಾಯಾಲಯದಲ್ಲಿ ಹಲವಾರು ಪ್ರಕರಣಗಳನ್ನು ಹಾಕಿದ್ದಾರೆ ಎಂದರೆ ನಿಜ. ಸದರಿ ವಿಚಾರವು ಊರಿನ ಜನರಿಗೆ ಗೊತ್ತಿದೆ ಎಂದರೆ ನಿಜ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.